## ಮೊದಲನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ

ದಿನಾಂಕ 23 ನೇ ಜುಲೈ ಮಾಹೆ 2026 ನೇ ಇಸವಿ.

**ಸಿ.ಸಿ. ನಂಃ 756/2026**

ರಾಜ್ಯ ಸರ್ಕಾರದ ಪರವಾಗಿ
ಪೊಲೀಸ್ ವೃತ್ತ ನಿರೀಕ್ಷಕರು,
ಕಾರ್ಕಳ ವೃತ್ತ, ಕಾರ್ಕಳ,
ಉಡುಪಿ ಜಿಲ್ಲೆ. ...... ಫಿರ್ಯಾದುದಾರರು

- ವಿರುದ್ಧ -

ಶ್ರೀ ಪ್ರೇಮಾನಂದ ದೇವಾಡಿಗ
ಪ್ರಾಯ:38 ವರ್ಷ
ತಂದೆ: ರಾಮ ದೇವಾಡಿಗ
ವಾಸ: ಮನೆ ನಂಬ್ರ 6-1116 ಕಂಬಳಗುತ್ತು ಮನೆ,
ಬೋಳ ಅಂಚೆ ಮತ್ತು ಗ್ರಾಮ,
ಕಾರ್ಕಳ ತಾಲೂಕು,
ಉಡುಪಿ ತಾಲೂಕು. ...... ಆರೋಪಿ

### ಆಪಾದನೆ

ಆರೋಪಿಯಾದ ನೀವು KA-20-D-6545 ನೇ ನಂಬ್ರದ ಆಟೋರೀಕ್ಷಾವನ್ನು ದಿನಾಂಕ:05-10-2025 ರಂದು ರಾತ್ರಿ 11:00 ಗಂಟೆಗೆ ಪಡುಬಿದ್ರಿ-ಕಾರ್ಕಳ ರಾಜ್ಯ ಹೆದ್ದಾರಿ 01 ರಲ್ಲಿ, ಬೆಳ್ಮಣ್ ಕಡೆಯಿಂದ ಕಾರ್ಕಳ ಕಡೆಗೆ ಅತೀವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಕಾರ್ಕಳ ತಾಲೂಕು ಬೆಳ್ಮಣ್ ಗ್ರಾಮದ ಬೆಳ್ಮಣ್ ಬೋರ್ಡ್ ಶಾಲೆಯ ಬಳಿ ರಸ್ತೆಯ ಎಡಬದಿಯಲ್ಲಿ ಸಾಕ್ಷಿ 1 ನೇ ಹಾಗೂ ರಾಜೇಶ್ ಹೆಬ್ರಾಮ್ ರವರು ಬೆಳ್ಮಣ್ ಕಡೆಯಿಂದ ಗೋಳಿಕಟ್ಟೆ ಕಡೆಗೆ ನಡೆದುಕೊಂಡು ಹೋಗುವಾಗ ನೀವು ಆಟೋರೀಕ್ಷಾವನ್ನು ರಸ್ತೆಯ ತೀರಾ ಎಡಬದಿಗೆ ಚಲಾಯಿಸಿ ರಾಜೇಶ್ ಹೆಬ್ರಾಮ್ ರವರಿಗೆ ಡಿಕ್ಕಿ ಹೊಡೆದಿದ್ದು, ಆ ಮೂಲಕ

ಭಾರತೀಯ ನ್ಯಾಯ ಸಂಹಿತೆ 2023 ಕಲಂ 281 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ, ಆರೋಪಿಯಾದ ನೀವು ಮೇಲೆ ಹೇಳಿದ ದಿನ, ಸಮಯ ಹಾಗೂ ಸ್ಥಳದಲ್ಲಿ ಮೇಲೆ ಹೇಳಿದಂತೆ ಅಪಘಾತ ಪಡಿಸಿದ ಪರಿಣಾಮ ರಾಜೇಶ್ ಹೆಬ್ರಾಮ್ ರವರು ರಸ್ತೆಗೆ ಬಿದ್ದು ತಲೆಗೆ ಗಂಭೀರ ಗಾಯಗೊಂಡು ಮಂಗಳೂರು ಜಿಲ್ಲಾ, ವೆನ್ಲಾಕ್ ಆಸ್ಪತ್ರೆಯಲ್ಲಿ, ಚಿಕಿತ್ಸೆಯಲ್ಲಿರುತ್ತಾ ಚಿಕಿತ್ಸೆಗೆ ಸ್ಪಂದಿಸದೇ ದಿನಾಂಕ: 07-10-2025 ರಂದು ಬೆಳಿಗ್ಗೆ 07:35 ಗಂಟೆಗೆ ರಾಜೇಶ್ ಹೆಬ್ರಾಮ್ ಮೃತಪಟ್ಟಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ 2023 ಕಲಂ 106 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಆರೋಪಿಃ

ಪ್ರಶ್ನೆ 1: ಮೇಲೆ ಹೇಳಿದ ಆರೋಪವನ್ನು ಕೇಳಿರುವಿರಾ?

ಉತ್ತರಃ

ಪ್ರಶ್ನೆ 2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ಪ್ರತಿರಕ್ಷೆ ಸಾಕ್ಷಿ ಮಾಡಲು ಬಯಸುತ್ತೀರೋ?

ಉತ್ತರಃ

(ಆರೋಪಿಗೆ ಮೇಲಿನ ಆಪಾದನೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ. )

ಮೊ.ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.,
ಕಾರ್ಕಳ.